SERVICE ABOVE SELF



Rotary

विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

Rotary THE MAGIC OF ROTARY 2024-25

Rtn. Stephanie A. Urchick
RI President 2024-25

Rtn. CA Dev Anand
District Governor 2024-25

Rtn. K. Sooryanarayana Udpa
President, Mob: 99009 66114

Rtn. N.G. Usha
Secretary, Mob : 81975 92278

Rtn. M. Madhavachar
Bulletin Editor, Mob: 98862 73495

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 67 ಸಂಚಿಕೆ –48 ದಿನಾಂಕ : 28–05–2025

## ಕೌಟುಂಬಿಕ ಸ್ನೇಹ ಮಿಲನ

**ದಿನಾಂಕ: 28.05.2025 ರಂದು ನಮ್ಮ ಕ್ಲಬ್‌ನ 2024–25 ನೇ ಸಾಲಿನ 48 ನೇ ಸಭೆ. ಕೌಟುಂಬಿಕ ಸ್ನೇಹ ಮಿಲನದ ವಿಶೇಷ ಸಭೆ. ನಗರದ ರಾಗರಂಜಿನಿ ತಂಡದವರು ಅಂದು ಆಗಮಿಸಿ ರಾಗಲಹರಿ ಎಂಬ ಗೀತಗಾಯನ ಕಾರ್ಯಕ್ರಮವನ್ನು ನಡೆಸಿಕೊಟ್ಟರು.**

**ಅಂದಿನ ಸಭೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನಮ್ಮ ಸದಸ್ಯರು ಪಾಲ್ಗೊಂಡು ಸಭೆಯನ್ನು ಯಶಸ್ವಿಗೊಳಿಸಿಕೊಟ್ಟದ್ದೇ ಅಲ್ಲದೇ ಹಾಡುಗಾರರಿಗೆ ಸ್ಫೂರ್ತಿಯನ್ನು ಕೊಟ್ಟಿದ್ದು ಅನುಕರಣೀಯವಾಗಿದೆ. ಅಂದು ಶಿವಮೊಗ್ಗ ನಗರದ ರಾಗರಂಜಿನಿ ತಂಡದ ಖ್ಯಾತ ಗಾಯಕ– ರವಿಶಂಕರ ಗುರೂಜಿ ಶಾಲೆಯಲ್ಲಿ ಸಂಗೀತದ ಗುರುವಾಗಿ ಕಾರ್ಯ ನಿರ್ವಹಿಸುತ್ತಿರುವ ಈಗಾಗಲೇ ಶಿವಮೊಗ್ಗೆಯ ಜನಮನದಲ್ಲಿ ತಮ್ಮ ಗಾಯನದ ಮೂಲಕ ತಮ್ಮ ಸಾಮಾಜಿಕ ಕಳಕಳಿಯ ಮೂಲಕ ಮೆಚ್ಚುಗೆ ಗಳಿಸಿರುವ ಗಾಯಕ ಶ್ರೀ ಪ್ರಹ್ಲಾದ್ ದೀಕ್ಷಿತ್‌ರವರು ಪ್ರಮುಖ ಗಾಯಕರಾಗಿ ಆಗಮಿಸಿದ್ದು ಅವರೊಂದಿಗೆ ಕು. ಅನುಷಾ ಕಾನ್ಲೆ ಮತ್ತು ಕು.ಸಾಕ್ಷಿಯವರು ಪಾಲ್ಗೊಂಡಿದ್ದು ಇದಕ್ಕೆ ಪೂರಕವಾಗಿ ವಿನಯ ಸೌಂಡ್ಸ್‌ರವರು ಸಹಕರಿಸಿದ್ದು ಕಾರ್ಯಕ್ರಮ ಅತ್ಯಂತ ಅದ್ದೂರಿಯಾಗಿ, ಯಶಸ್ವಿಯಾಗಿ ನಡೆದು ಗಾಯಕರು ಸುಶ್ರಾವ್ಯ ಗೀತೆಯನ್ನು ಹಾಡಿ ನಮ್ಮೆಲ್ಲರ ಮನರಂಜಿಸಿದರು. ವೇದಿಕೆ ಕಾರ್ಯಕ್ರಮದಲ್ಲಿ ಗಾಯಕರಾದ ಶ್ರೀ ಪ್ರಹ್ಲಾದ್ ದೀಕ್ಷಿತ್‌ರವರು ಮುಖ್ಯ ಅತಿಥಿಯಾಗಿ, ಅಧ್ಯಕ್ಷರಾದ ರೊ.ಕೆ.ಸೂರ್ಯ ನಾರಾಯಣ ಉಡುಪರವರು ಮತ್ತು ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು ಉಪಸ್ಥಿತರಿದ್ದು ಕಲಾಪವನ್ನು ನಡೆಸಿಕೊಟ್ಟರು.**









ಅಂದಿನ ಸಭೆಯಲ್ಲಿ ಪ್ರಾರ್ಥನೆ ರೊ.ಕಿಶೋರ್ ಶೀರನಾಳಿಯವರ ಮಧುರಗಾನ "ಮುಕುಂದ ಮರೆಯದಿರೋ ಮಮ ಸ್ವಾಮಿ" ಎಂಬ ಗಾಯನದೊಂದಿಗೆ ಕಲಾಪ ಆರಂಭ. ರೊ.ಶ್ರೀನಿವಾಸ್‌ರವರು ಸರ್ವರನ್ನು ಸ್ವಾಗತಿಸಿದರು. ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು ಪ್ರಕಟಣೆ ನೀಡಿದರು. ರೊ. ಬಿ.ಎಸ್. ಮಹದೇವ್ ಮತ್ತು ರೊ.ವೀರಣ್ಣ ಎ. ಹುಗ್ಗಿಯವರು ವೇದಿಕೆಗೆ ಆಗಮಿಸಿ ತಮ್ಮ ಹುಟ್ಟು ಹಬ್ಬದ ಶುಭಾಶಯಗಳು ಹಾಗೂ ನೆನಪಿನ ಕಾಣಿಕೆ ಸ್ವೀಕರಿಸಿದರು. ಇದೇ ಸಂದರ್ಭದಲ್ಲಿ





### ಈ ವಾರ

**ದಿನಾಂಕ: 04–06–2025, ಬುಧವಾರ ಸಂಜೆ 6:45ಕ್ಕೆ,**

**Chief Guest:**

**Dr. Krishna S. Bhat, Physician**

**Topic:**

**Mind Power Techniques**

ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ

ಸ್ಥಳ: **ರೋಟರಿ ಯುವ ಕೇಂದ್ರ,** ಸವಳಂಗ ರಸ್ತೆ, ಶಿವಮೊಗ್ಗ














ರೊ.ಡಿ. ಎಲ್. ಮಂಜುನಾಥರವರು ಮಾತನಾಡಿ, ಇಂದಿನ ಗಾಯಕ ಶ್ರೀ ಪ್ರಹ್ಲಾದ್ ದೀಕ್ಷಿತ್‌ರವರು ಬೇರೆ ಬೇರೆ ಸಂಸ್ಥೆಗಳಿಗೆ ಸಹಾಯಾರ್ಥ ಪ್ರದರ್ಶನ ನೀಡಿ ಬಂದ ಹಣವನ್ನು ದಾನವಾಗಿ ನೀಡುತ್ತಿರುವ ಬಗ್ಗೆ ಅದರಂತೆ ತಮ್ಮ ಶರಣ್ಯಕ್ಕೆ ದೇಣಿಗೆ ನೀಡಿರುವುದರ ಬಗ್ಗೆ ತಿಳಿಸಿದರು. ರೊ. ಹೆಚ್.ಎಂ. ವಾಗ್ದೇವಿಯವರು ಮುಖ್ಯ ಅತಿಥಿ ಶ್ರೀ ಪ್ರಹ್ಲಾದ್ ದೀಕ್ಷಿತ್‌ರ ಪರಿಚಯ ಮಾಡಿದರು.

ಗಾಯನ ಕಾರ್ಯಕ್ರಮದಂತೆ ಶ್ರೀ ಪ್ರಹ್ಲಾದ್ ದೀಕ್ಷಿತ್ ಮತ್ತು ತಂಡದವರು ಈ ಕೆಳಕಂಡಂತೆ ಹಾಡುಗಳನ್ನು ಸುಶ್ರಾವ್ಯವಾಗಿ ಗಾಯನ ಮಾಡಿ ನಮ್ಮೆಲ್ಲರ ಮನಸೂರೆಗೊಂಡರು.

- 'ನೀನೇಕೆ ಮುಳ್ಳಲ್ಲಿ ಮುಳ್ಳಾಗುವೆ – ಹೂವಲ್ಲಿ ಹೂವಾಗು – ಹಣ್ಣಲ್ಲಿ ಹಣ್ಣಾಗು' ದೊಡ್ಡರಂಗೇಗೌಡ ವಿರಚಿತ ಭಾವಗೀತೆ ಶ್ರೀ ಪ್ರಹ್ಲಾದ್ ದೀಕ್ಷಿತ್‌ರವರಿಂದ ಪ್ರಾರಂಭ.
- 'ತಪ್ಪು ಯಾರದೋ ಯಾರಿಗೆ ಶಿಕ್ಷೆ ಕಷ್ಟ ಯಾರಿಗೋ–ಯಾರಿಗೋ ರಕ್ಷೆ' ಶ್ರೀ ಪ್ರಹ್ಲಾದ್ ದೀಕ್ಷಿತ್‌ರವರಿಂದ

ಭಾವ ಗೀತೆಗಳು ನಶಿಸಿ ಹೋಗುತ್ತಿರುವ ಇಂದಿನ ದಿನಮಾನದಲ್ಲಿ ಭಾವಗೀತೆಗಳನ್ನು ರಚಿಸಿರುವ ಕವಿಗಳಿಗೆ ಗೌರವ ಸಲ್ಲಿಸುವ ನಿಮಿತ್ತ ಭಾವಗೀತೆಗಳನ್ನು ಹಾಡಬೇಕು ಎಂದು ತಿಳಿಸುತ್ತಾ –

ಕಾರ್ಯಕ್ರಮ ಪ್ರಾರಂಭದಲ್ಲಿ–'ಕೋಟಿ ಕೋಟಿ ನಮನ ನಿನಗೆ ಮಹಾಗಣಪತಿ' ಹಾಡು– ಕು.ಅನುಷಾ ಕಾನ್ಲೆ ಮತ್ತು ಕು.ಸಾಕ್ಷಿಯವರಿಂದ.

ಖ್ಯಾತ ನಟ ದಿ.ವಿಷ್ಣುವರ್ಧನ್ ಹಾಗೂ ಖ್ಯಾತ ನಟಿ ಭಾರತಿಯವರ ದಾಂಪತ್ಯಕ್ಕೆ ಮುನ್ನುಡಿ ಬರೆದ– 'ಮಾಮರವೆಲ್ಲೋ ಕೋಗಿಲೆ ಎಲ್ಲೋ–ಏನೀ ಸ್ನೇಹ ಸಂಬಂಧ' ಹಾಡು ಶ್ರೀ ಪ್ರಹ್ಲಾದ್ ದೀಕ್ಷಿತ್‌ರವರಿಂದ.

ಹಿಂದಿನ ದಿನಮಾನದಲ್ಲಿ ಅವರವರ ಕೆಲಸದಲ್ಲಿ ಬದ್ಧತೆ ಹೇಗಿತ್ತು ಎನ್ನುವುದನ್ನು ವಿವರಿಸುತ್ತಾ ಸಂಗೀತ ನಿರ್ದೇಶಕ ಶ್ರೀ ಜಿ.ಕೆ. ವೆಂಕಟೇಶ್‌ರವರು ಹಾಡೊಂದರ ರೆಕಾರ್ಡಿಂಗ್‌ಗೆ ಅಣಿಯಾದಾಗ ಅದರಲ್ಲಿ ಪ್ರಮುಖರಾಗಿದ್ದ ಸಚ್ಚಿದಾನಂದರವರ ಇಡೀ ಕುಟುಂಬ ಅವಘಡಕ್ಕೊಳಗಾಗಿದ್ದು, ಗಾಯಕ ಪಿ.ಬಿ ಶ್ರೀನಿವಾಸ್‌ರವರ ಮಾತೋಶ್ರೀಯವರು ನಿಧನರಾದ ಸಂದರ್ಭವಿದ್ದಾಗ್ಯು ಅವರು ಬಂದು ಹಾಡಿ ರೆಕಾರ್ಡಿಂಗ್ ಕಾರ್ಯಪೂರೈಸಿ ಕೊಟ್ಟಿದ್ದು ಅಂದಿನ ಜನರ ಕಾರ್ಯ ಬದ್ಧತೆಗೆ ಸಾಕ್ಷಿಯಾಗಿದೆ ಎನ್ನುತ್ತಾ, ಆ ಹಾಡು–'ರವಿ ವರ್ಮನ ಕುಂಚದ ಕಲೆ ಬಲೆ ಸಾಕಾರವೋ'– ಶ್ರೀ ಪ್ರಹ್ಲಾದ್ ದೀಕ್ಷಿತ್‌ರವರಿಂದ.

ಜ್ಞಾನದೇಶಿಕ ಎಂದೇ ಖ್ಯಾತರಾದ ಖ್ಯಾತ ಸಂಗೀತ ನಿರ್ದೇಶಕರಾದ ಶ್ರೀ ಇಳಯರಾಜರವರ ನಿರ್ದೇಶನದಲ್ಲಿ ಕ್ರಿಯೇಟಿವಿಟಿಯಾಗಿ ಹೇಗೆ ಜಾನಪದ –ಭಾವ ಸಂಗೀತವನ್ನು ಚಿತ್ರ ಸಂಗೀತದಲ್ಲಿ ಅಳವಡಿಸುತ್ತಾರೆ ಎಂದು ವಿವರಿಸಿ ಡಾ. ರಾಜ್ ಕುಮಾರ್‌ರವರು ಹಾಡಿದ 'ಜೀವ ಹೂವಾಗಿದೆ, ಭಾವ ಜೇನಾಗಿದೆ ಬಾಳು ಹಾಡಾಗಿದೆ ನಿನ್ನ ಸೇರಿ ನಾನು' ಎಂಬ ಗೀತೆಯನ್ನು ಶ್ರೀ ಪ್ರಹ್ಲಾದ್ ದೀಕ್ಷಿತ್ ಮತ್ತು ಕು.ಅನುಷಾ ಕಾನ್ಲೆಯವರು ಹಾಡಿದರು.

- ಹಂಸಲೇಖಾರವರು ವಿಶಿಷ್ಟ ಸಂದರ್ಭದಲ್ಲಿ ರಚಿಸಿದ 'ಈ ಭೂಮಿ ಬಣ್ಣದ ಬುಗುರಿ ಆ ಶಿವನೇ ಚಾಟಿಕಣೋ' ಹಾಡು ಶ್ರೀ ಪ್ರಹ್ಲಾದ್ ದೀಕ್ಷೀತ್‌ರವರಿಂದ
- 'ಈ ಹಸಿರು ಸಿರಿಯಲಿ ಮನಸು ಮೆರೆಯಲಿ ನವಿಲೇ' – ಕು. ಸಾಕ್ಷಿಯವರಿಂದ
- ನಮ್ಮ ಕ್ಲಬ್‌ನ ಸದಸ್ಯರಾದ ರೊ. ಎಂ.ಎನ್.ಎಸ್. ಮಣಿಯವರಿಂದ– 'ಆಕಾಶದಿಂದ ಧರೆಗಿಳಿದ ರಂಭೆ ಇವಳೇ ಇವಳೇ ಚಂದನದ ಗೊಂಬೆ' ಪ್ರಸ್ತುತ ಪಡಿಸಲ್ಪಟ್ಟಿತು.

ಇದೇ ಸಂದರ್ಭದಲ್ಲಿ ಈ ತಿಂಗಳಲ್ಲಿ ತಮ್ಮ ವಿವಾಹ ವಾರ್ಷಿಕೋತ್ಸವ ಆಚರಿಸಿಕೊಂಡ ರೊ.ಶ್ರೀಕಾಂತ್‌ನಾಡಿಗ್ ಮತ್ತು ಶ್ರೀಮತಿ. ಶೃತಿ, ರೊ.ವೀರಣ್ಣ ಎ. ಹುಗ್ಗಿ ಮತ್ತು ಶ್ರೀಮತಿ ಉಷಾದೇವಿ, ರೊ. ಅಜಯಕುಮಾರ್ ಶೇಟ್ ಇವರುಗಳನ್ನು ವೇದಿಕೆಗೆ ಆಹ್ವಾನಿಸಿ ಅಭಿನಂದಿಸಲಾಯಿತು.

ಕಾರ್ಯಕ್ರಮದ ವಾಡಿಕೆಯಂತೆ–ಗಾಯಕರಾದ ಶ್ರೀ ಪ್ರಹ್ಲಾದ್ ದೀಕ್ಷಿತ್, ಕು. ಅನುಷಾ ಕಾನ್ಲೆ ಮತ್ತು ಕು.ಸಾಕ್ಷಿಯವರನ್ನು ವೇದಿಕೆಯಲ್ಲಿ ಶಾಲು ಹೊದಿಸಿ ಮಾಲಾರ್ಪಣೆ ಮಾಡಿ ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು.

ರೊ.ಡಾ. ರಕ್ಷಾರಾವ್, ರೊ.ಡಾ. ಹೆಚ್.ಟಿ. ನಿರ್ಮಲಾ ರೊ.ಡಿ.ಎಲ್. ಮಂಜುನಾಥ್, ರೊ.ಕೆ. ಸೂರ್ಯ ನಾರಾಯಣ ಮತ್ತು ರೊ.ಎನ್.ಜಿ. ಉಷಾರವರು ಅಭಿನಂದಿಸುವ ಕಾರ್ಯದಲ್ಲಿ ಸಹಕರಿಸಿದರು.

ರೊ. ಎನ್.ಜಿ. ಉಷಾರವರು ಸರ್ವರನ್ನು ವಂದಿಸಿದರು. ಕಾರ್ಯಕ್ರಮದ ನಂತರ ಪುಷ್ಕಳ ಭೋಜನ ಏರ್ಪಾಡಾಗಿತ್ತು. ❖

**ನೀವು ಅತ್ಯುತ್ತಮ ರೋಟರಿ ಸದಸ್ಯರೆಂದಾದರೆ ಪ್ರತಿ ವಾರದ ಸಭೆಗೆ ತಪ್ಪದೇ ಬನ್ನಿ**

## ಸಿಗಂದೂರಿಗೆ ಪಿಕ್ನಿಕ್ ಪ್ರೋಗ್ರಾಂ

ದಿನಾಂಕ: 15-06-2025, ಭಾನುವಾರದಂದು ಸಿಗಂದೂರು ಸೇತುವೆ ವೀಕ್ಷಣೆ ಹಾಗೂ ಸಿಗಂದೂರು ಚೌಡೇಶ್ವರಿ ದೇವಿಯ ದರ್ಶನ ಮಾಡಲು ಪಿಕ್ನಿಕ್ ಏರ್ಪಡಿಸಲಾಗಿದೆ. ಬರುವಾಗ ವರದಹಳ್ಳಿಯ ಶ್ರೀ ಶ್ರೀಧರ ಆಶ್ರಮವನ್ನು ನೋಡಿ ಬರಬಹುದು. ಪಿಕ್ನಿಕ್‌ಗೆ ಬರುವ ರೋಟರಿ ಮಿತ್ರರ ಸಂಖ್ಯೆಗೆ ಅನುಗುಣವಾಗಿ ವಾಹನವನ್ನು ನಿಶ್ಚಯಿಸಲಾಗುವುದು.

ಪಿಕ್ನಿಕ್‌ಗೆ ಬರುವವರು ಸಂಪರ್ಕಿಸಿ :

ರೊ. ಡಿ.ಪಿ. ಮೋಹನ್, ಪಿಕ್ನಿಕ್ ಕಮಿಟಿ ಚೇರ್ಮನ್

94498 17922

ರೊ. ಎನ್. ವಿ. ಭಟ್ – ಪ್ರೋಗ್ರಾಂ ಕಮಿಟಿ ಚೇರ್ಮನ್

94481 71923

## ಸೂಪರ್ ಜೋಡಿ ಸ್ಪರ್ಧೆ

ದಿನಾಂಕ: 22-06-2025, ಭಾನುವಾರದಂದು ನಮ್ಮ ರೋಟರಿ ಕ್ಲಬ್ ಹಾಗೂ ಸೀನಿಯರ್ ಚೇಂಬರ್ ಇಂಟರ್‌ನ್ಯಾಷನಲ್ ಭಾವನಾ ಲೀಜನ್ ಸಹಯೋಗದಲ್ಲಿ ದಂಪತಿಗಳಿಗೆ "ಸೂಪರ್ ಜೋಡಿ ಸ್ಪರ್ಧೆ' ವಿಶೇಷ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

**ದಂಪತಿಗಳಿಗೆ ಪ್ರವೇಶ ಶುಲ್ಕ ರೂ. 400/-**

ಈ ಸ್ಪರ್ಧೆಯ ಬಗ್ಗೆ ನಿಮ್ಮ ಪರಿಚಿತರಿಗೆ, ಸ್ನೇಹಿತರಿಗೆ ಹೇಳಿ ಹೆಸರು ನೋಂದಾಯಿಸುವಂತೆ ತಿಳಿಸಿ.

ಆಸಕ್ತಿಯಿರುವ ಸದಸ್ಯರೂ ಹೆಸರು ನೋಂದಾಯಿಸಿ:

ಎನ್. ಜಿ. ಉಷಾ – 8197592278

ರೋಟರಿ ಬಯೋಡೈವರ್ಸಿಟಿ ಫೌಂಡೇಷನ್‌ಗೆ ಈ ಕೆಳಕಂಡ ಸದಸ್ಯರು ರೂ.2000.00 ನೀಡಿ ಟ್ರಸ್ಟಿ ಆಗಿರುತ್ತಾರೆ. ಅವರಿಗೆ ಅಭಿನಂದನೆಗಳು.

| | |
|---|---|
| ರೊ. ಸಿ.ಬಿ.ವೀರಣ್ಣ | ರೊ. ಕೆ. ಮಂಜುನಾಥ್ |
| ರೊ. ಗೀತಾಂಜಲಿ ಪಿ | ರೊ.ಡಾ. ರಾಜಾರಾಮ್ |
| ರೊ. ಬಿ.ಎನ್. ವಿಶ್ವೇಂದ್ರ | ರೊ. ಶೈಲಿನ್ ಬಾಬು |

ಉಳಿದ ಕ್ಲಬ್‌ನ ಸದಸ್ಯರು ಸಹ ಟ್ರಸ್ಟಿಗಳಾಗಲು ಮತ್ತು ಪರಿಸರ ಸಂರಕ್ಷಣೆಗೆ ಕೈಜೋಡಿಸಲು ವಿನಂತಿಸುತ್ತೇವೆ.

– ರೊ. ವೀರಣ್ಣ ಎ. ಹುಗ್ಗಿ

ಜಂಟಿ ಕಾರ್ಯದರ್ಶಿ, ಬಯೋಡೈವರ್ಸಿಟಿ ಫೌಂಡೇಷನ್, ಶಿವಮೊಗ್ಗ

## ಶಿವಮೊಗ್ಗದ ಎಲ್ಲಾ ರೋಟರಿ ಕ್ಲಬ್‌ಗಳ ಸಂಯುಕ್ತ ಆಶ್ರಯದಲ್ಲಿ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮ

ದಿನಾಂಕ 5-6-2025 ಗುರುವಾರದಂದು ವಿಶ್ವ ಪರಿಸರ ದಿನಾಚರಣೆಯ ಪ್ರಯುಕ್ತ ಶಿವಮೊಗ್ಗ ರೋಟರಿ ಬಯೋಡೈವರ್ಸಿಟಿ ಫಾರೆಸ್ಟ್ ಗಾಡಿಕೊಪ್ಪದಲ್ಲಿ ಬೆಳಗ್ಗೆ 8:30 ರಿಂದ ವಿಶ್ವಪರಿಸರ ದಿನಾಚರಣೆ ಕಾರ್ಯಕ್ರಮ ಇರುತ್ತದೆ. ಶಿವಮೊಗ್ಗದ ರೋಟರಿ ಕ್ಲಬ್‌ನಿಂದ 39 ಸದಸ್ಯರು ಈಗಾಗಲೇ ಬಯೋಡೈವರ್ಸಿಟಿ ಫಾರೆಸ್ಟ್ ಮೆಂಬರ್ಶಿಪ್ ತೆಗೆದುಕೊಂಡಿದ್ದಾರೆ. ಈ ಕಾರ್ಯಕ್ರಮಕ್ಕೆ ಎಲ್ಲಾ ಸದಸ್ಯರು ಬನ್ನಿ.


ಉಪಹಾರದ ವ್ಯವಸ್ಥೆ ಇರುತ್ತದೆ.

Rotary

# DISTRICT PROJECTS

2024-25

### Awareness of Arogya Swatchatha



### Awareness of Green & Water



### Awareness of Education & Law



### Awareness of Rasthe Sanchara Safety





## ಸಂಪಾದಕೀಯ

### ಬದುಕು ಬದಲಿಸಬೇಕು ಎಂದುಕೊಂಡಿದ್ದರೆ ಅದಕ್ಕೆ ಹಣ ಬೇಡ ಯೋಚನೆಗಳು ಬದಲಾದರೆ ಸಾಕು...!

ಆತ 5ನೇ ತರಗತಿ ಹುಡುಗ. ನಿನ್ನೆಯಿಂದ ಅಮ್ಮನ ಬಳಿ ಗಲಾಟೆ ಮಾಡಿ ೮೦ ರೂ. ತೆಗೆದುಕೊಂಡು ಉಡುಪಿಯ ಆ ಮೆಡಿಕಲ್‌ಶಾಪ್‌ಗೆ ಬಂದಿದ್ದ. ಡೈರಿ ಮಿಲ್ಕ್‌ನ ಕ್ರಿಸ್ಪೆಲ್ಲೋ ಎನ್ನುವ ಚಾಕಲೇಟ್ ತಿನ್ನುವ ಆಸೆಯಾಗಿತ್ತು ಅವನಿಗೆ. ದೂರದಲ್ಲಿ ಕಾಣುತ್ತಿತ್ತು ಚಾಕಲೇಟ್, ಆಸೆಯಿಂದ ಬಾಯಲ್ಲಿ ನೀರು ಬರುತ್ತಿತ್ತು. ಅಕ್ಕನಿಗೆ ಒಂದು ಪೀಸ್ ಕೊಡುತ್ತೇನೆ ಉಳಿದಿದ್ದು ಇಲ್ಲೇ ತಿಂದು ಬಿಡುತ್ತೇನೆ ಎಂದು ಯೋಚಿಸುತ್ತಿತ್ತು ಅವನ ಮನಸ್ಸು. ಆದರೆ ಮೆಡಿಕಲ್‌ಶಾಪ್‌ನ ಹುಡುಗ ಬಹಳ ಹೊತ್ತಿನಿಂದ ಆ ಅಜ್ಜನಲ್ಲಿ ಜೋರು ಜೋರಾಗಿ ಮಾತಾಡುತ್ತಿದ್ದ. 'ನೋಡಿ ಅಜ್ಜ ಈ ಇನ್ಹೇಲರ್ (ಅಸ್ತಮಾದಲ್ಲಿ ಬಾಯಿಯಿಂದ ಔಷಧಿ ಮೇಲೆ ಎಳೆದುಕೊಳ್ಳುವ ಚಿಕ್ಕ ಯಂತ್ರ) ಗೆ ೨೮೦ ರೂ. ನೀವು ಕೊಟ್ಟಿರುವುದು ೨೦೦ ಮಾತ್ರ. ೮೦ ರೂ. ಕಡಿಮೆ ಇದೆ' ಮತ್ತೆ ಹೇಳಿದ ಸಿಟ್ಟಿನಿಂದ.

ಅಜ್ಜ ಮತ್ತೆ ತನ್ನ ಕೊಳೆಯಾದ ಪೈಜಾಮದ ಎಲ್ಲಾ ಕಿಸೆಯನ್ನು ಮತ್ತೆ ತಡಕಾಡಿದ. 'ಅಷ್ಟೇ ಇರುವುದು ಸರ್' ಎಂದರು ಬೇಸರದಿಂದ. ಅಂಗಡಿಯ ಹುಡುಗ ಅಜ್ಜನ ಕೈಯಿಂದ ಇನ್ಹೇಲರ್‌ನ್ನು ಕಸಿದುಕೊಂಡ. 'ನಿನ್ನ ೮೦ ರೂಪಾಯಿನ ನನ್ನ ಸಂಬಳದಿಂದ ಕಟ್ ಮಾಡುತ್ತಾರೆ. ಹೋಗು ಹೋಗು ಇಲ್ಲಿಂದ ಬೆಳಗ್ಗೆ ಬೆಳಗ್ಗೆ ಎಂತೆಂತಹ ಗಿರಾಕಿ ಬರುತ್ತಾರೆ' ಮತ್ತೆ ಕೂಗಿದ ಮೆಡಿಕಲ್ ಹುಡುಗ.

ಈ ಬಾರಿ ಅವನ ಸ್ವರ ಜೋರಾಗಿತ್ತು. ಸುತ್ತ ಇದ್ದ ಗ್ರಾಹಕರು ಅಜ್ಜನನ್ನೊಮ್ಮೆ ಗುರಾಯಿಸಿದರು. ಅಜ್ಜ "ಮತ್ತೆ ಹಣ ಕೊಡುತ್ತೇನೆ ಕೊಡಿ" ಎಂದು ದಂಬಾಲು ಬಿದ್ದ. ಅಜ್ಜನ ಧ್ವನಿ ಮೆತ್ತಗಾಗಿತ್ತು. ಅಲ್ಲೇ ಕುಸಿದ ಅಜ್ಜ. ಹಿಂದೆ ಮುಂದೆ ನೋಡದ ಹುಡುಗ ತನ್ನ ಚಾಕಲೇಟ್‌ಗೆಂದು ತಂದ ೮೦ ರೂ ಅಲ್ಲಿಟ್ಟು ಆ ಇನ್ಹೇಲರ್ ಕೊಂಡು ಅಜ್ಜನಿಗೆ ಕೊಟ್ಟ. ಅಜ್ಜ ಆ ಇನ್ಹೇಲರ್ ತೆಗೆದುಕೊಂಡು ನಿಧಾನವಾಗಿ ಸುಧಾರಿಸಿಕೊಂಡು ಹುಡುಗನಿಗೆ ಕೇಳಿದ. 'ನಿನ್ನ ೮೦ ರೂ ನನಗೆ ಕೊಟ್ಟೆ. ಆದರೆ ನನ್ನ ಬಳಿ ವಾಪಸ್ಸು ಕೊಡಲು ಇಲ್ಲ'. ಹುಡುಗ ಹೇಳಿದ 'ಇರಲಿ ಬಿಡಿ ಅಜ್ಜ. ಚಾಕಲೇಟ್ ತಗೊ ಎಂದು ಕೊಟ್ಟಿದ್ದರು. ಕೇಳಿದರೆ ಚಾಕಲೇಟ್ ತಿಂದೆ ಎನ್ನುತ್ತೇನೆ. ಆ ೮೦ ರೂ. ನಿಮ್ಮ ಜೀವ ಉಳಿಸಿದೆ' ಎಂದವನೇ ನಗುತ್ತಾ ಮನೆಯತ್ತ ಓಡಿದ. ಅಲ್ಲೇ ಇದ್ದ ಆ ಮೆಡಿಕಲ್‌ಶಾಪ್‌ನ ಹುಡುಗನಿಗೆ ಆ ಮಗುವಿನ ಮಾತು ಕಪಾಳಕ್ಕೆ ಬಾರಿಸಿದಂತೆ ಆಗಿತ್ತು. ೮೦ ರೂ. ನನ್ನ ಸಂಬಳದಿಂದ ಹೋದರೂ ಕೊಡಬಹುದಿತ್ತು ಅನಿಸಿತ್ತು. ಕ್ರಿಸ್ಪೆಲ್ಲೋ ಚಾಕಲೇಟ್ ತೆಗೆದುಕೊಂಡು ಆ ಹುಡುಗನತ್ತ ಓಡಿದ ಮೆಡಿಕಲ್‌ಶಾಪ್ ಹುಡುಗ. ಹುಡುಗನಿಗೆ ಚಾಕಲೇಟ್ ಕೊಟ್ಟ. ಹುಡುಗನ ಮುಖ ಅರಳಿತ್ತು. 'ನನ್ನ ಬಳಿ ಹಣ ಇಲ್ಲ' ಎಂದು ನಕ್ಕ. 'ತೊಂದರೆ ಏನಿಲ್ಲ, ನೀನು ನನಗೆ ಕಲಿಸಿದ ಜೀವನದ ಪಾಠ ಅದ್ಭುತ' ಎಂದ.

ಇದನ್ನೆಲ್ಲಾ ನೋಡುತ್ತಾ ನಿಂತಿದ್ದ ಮೆಡಿಕಲ್‌ಶಾಪ್ ಮಾಲೀಕ 'ನಿನ್ನ ಸಂಬಳಕ್ಕೆ ೮೦ ಅಲ್ಲ ೮೦೦ ರೂ. ಸೇರಿಸಿ ಕೊಡುತ್ತೇನೆ' ಎಂದುಬಿಟ್ಟ.

ಅದೆಷ್ಟು ಸುಂದರ ಸಂದೇಶ. ಮಗುವೊಂದು ಹೇಳಿಕೊಟ್ಟ ಪಾಠ ಮೆಡಿಕಲ್‌ಶಾಪ್‌ನ ಹುಡುಗ, ಮೆಡಿಕಲ್‌ಶಾಪ್‌ನ ಮಾಲೀಕನ ಜೀವನದ ಯೋಚನೆಗಳನ್ನು ಬದಲಾಯಿಸಿದರೆ, ಆ ವೃದ್ಧರ ಜೀವವನ್ನೇ ಉಳಿಸಿಬಿಟ್ಟಿತು. ಇಂತಹ ಅದೆಷ್ಟೋ ಪಾಠ ಪ್ರತಿನಿತ್ಯ ಸಮಾಜದಿಂದ ನಾವು ಕಲಿಯಬಹುದು.

ಕೆಲವೊಮ್ಮೆ ಒಂದೊಂದು ಸಣ್ಣ ಸಣ್ಣ ಕಾಳಜಿಗಳೂ ಸಹಾ ಒಂದು ಜೀವವನ್ನೇ ಉಳಿಸಬಲ್ಲದು.

❖ ರೊ. ಎಂ. ಮಾಧವಾಚಾರ್

## ಅಭಿನಂದನೆ



ನಮ್ಮ ಕ್ಲಬ್‌ನ ಮಾಜಿ ಅಧ್ಯಕ್ಷರು, ಮಾಜಿ ಸಹಾಯಕ ಗವರ್ನರ್ **ರೊ.ಎಸ್. ದತ್ತಾತ್ರಿಯವರು** ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಭಾದ **ಉಪಾಧ್ಯಕ್ಷರಾಗಿ** ನಿಯುಕ್ತಿಗೊಂಡಿದ್ದಾರೆ. ಅವರಿಗೆ ವಿಶ್ವಮಿತ್ರ ಬಳಗ ಅಭಿನಂದನೆ ಮತ್ತು ಶುಭ ಹಾರೈಸುತ್ತದೆ.

**ಹಾಗೂ**



ನಮ್ಮ ಕ್ಲಬ್‌ನ ಹಿರಿಯ ಸದಸ್ಯರಾದ – ಶಿವಮೊಗ್ಗ ಜಿಲ್ಲಾ ವಾಣಿಜ್ಯ ಸಂಘದ ಮಾಜಿ ಅಧ್ಯಕ್ಷರಾದ **ರೊ.ಎನ್. ಗೋಪಿನಾಥ್‌ರವರು** ಇತ್ತೀಚೆಗೆ ಕರ್ನಾಟಕದ ರಾಜ್ಯಪಾಲರಿಂದ **"ಆತಿಥ್ಯರತ್ನ"** ಎಂಬ ರಾಜ್ಯ ಮಟ್ಟದ ಪ್ರಶಸ್ತಿಯನ್ನು ಸ್ವೀಕರಿಸಿದ್ದಾರೆ. ಅವರಿಗೂ ಸಹ ವಿಶ್ವಮಿತ್ರ ಬಳಗ ಅಭಿನಂದನೆ ಹಾಗೂ ಶುಭ ಹಾರೈಸುತ್ತದೆ.

## Happy Birthday



*H.M. Vagdevi*
*1st June*



*Chandrappa N.*
*1st June*



*Prema Hegde*
*4rd June*

## ಚಿಂತನ

**ಕೆಲವು ವ್ಯಕ್ತಿಗಳು ಹೋದ ಕಡೆಯೆಲ್ಲಾ ಸಂತೋಷ ಸೃಷ್ಟಿಸುತ್ತಾರೆ.**
**ಮತ್ತೆ ಕೆಲವು ವ್ಯಕ್ತಿಗಳು ಅಲ್ಲಿಂದ ಹೋದರಷ್ಟೇ ಸಂತೋಷ ಇರುತ್ತದೆ.**
**ನಾವು ಸದಾ ಮೊದಲನೆ ಗುಂಪಿಗೆ ಸೇರುವ ವ್ಯಕ್ತಿಗಳಾಗಿ ಮತ್ತು ಯುವ ಜನರಲ್ಲಿ ಇದೇ ಭಾವನೆ ಬೆಳೆಸೋಣ.**



– ರೊ. ಕೆ. ಸೂರ್ಯನಾರಾಯಣ ಉಡುಪ

**ಚತುರ್ವಿಧ ಪರೀಕ್ಷೆ– ನಮ್ಮ ಚಿಂತನೆ, ಆಡುವ ಮಾತು ಅಥವಾ ಕೃತಿಗಳಲ್ಲಿ...**

1. ಇದು **ಸತ್ಯವೇ?**
2. ಇದು ಸಂಬಂಧಪಟ್ಟ ಎಲ್ಲರಿಗೆ **ನ್ಯಾಯ ಸಮ್ಮತವೇ?**
3. ಇದು **ಸದ್ಭಾವನೆ** ಮತ್ತು **ಉತ್ತಮ ಸ್ನೇಹ ಸಂಬಂಧವನ್ನು** ಬೆಳೆಸಬಲ್ಲುದೇ ?
4. ಇದು ಸಂಬಂಧಪಟ್ಟ ಎಲ್ಲರಿಗೆ **ಪ್ರಯೋಜನಕಾರಿಯೇ?**

To,

*Book Post*

ಮುದ್ರಣ: ರಾಯಲ್ ಪ್ರಿಂಟರ್ಸ್, ಶಿವಮೊಗ್ಗ, 98862 73495